Office of the Principal Director,
TTMC Building, 3rd Floor, 'A' Block, BMTC,
Shanthinagara, Bengaluru-560027.
Phone No:- 080- 22214817
Fax No:- 080- 22216500
e-mail: controllerstateaccounts@yahoo.com

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ

ಪ್ರಧಾನ ನಿರ್ದೇಶಕರ ಕಚೇರಿ,
ಟಿ.ಟಿ.ಎಂ.ಸಿ ಕಟ್ಟಡ, 3ನೇ ಮಹಡಿ, 'ಎ' ಬ್ಲಾಕ್, ಬಿ.ಎಂ.ಟಿ.ಸಿ,
ಶಾಂತಿನಗರ, ಬೆಂಗಳೂರು-560027.
ದೂರವಾಣಿ ಸಂಖ್ಯೆ:- 080- 22214817
ಫ್ಯಾಕ್ಸ್ ಸಂಖ್ಯೆ:- 080- 22216500
ಇ-ಮೇಲ್:controllerstateaccounts@yahoo.com

ನೋಂದಣಿಯಿಂದ ಬಾಕಿ ಪತ್ರ

ಸಂಖ್ಯೆ:ರಾಲೆಪ 01 ಸಿಪ್ರಪ 2022 /1403 ದಿನಾಂಕ:27.12.2022.

## ಅಧಿಕೃತ ಜ್ಞಾಪನ

ವಿಷಯ: ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಲೆಕ್ಕ ಸಹಾಯಕರುಗಳ ಪರೀಕ್ಷತಾ ಅವಧಿಯನ್ನು ಘೋಷಿಸುವ ಬಗ್ಗೆ.

ಉಲ್ಲೇಖ:
1. ಕರ್ನಾಟಕ ನಾಗರಿಕ ಸೇವಾ (ಪರೀಕ್ಷತಾ) ನಿಯಮಾವಳಿ 1977ರ ನಿಯಮಗಳು.
2. ಈ ಕಛೇರಿ ಅಧಿಕೃತ ಜ್ಞಾಪನ ಸಂಖ್ಯೆ: ರಾಲೆಪ 05, ಸಿಪ್ರನೇ 2019 ದಿನಾಂಕ:05.10.2019, ರಾಲೆಪ 01 ಸಿಪ್ರನೇ 2019 ದಿ:07.01.2020, ದಿ:06.02.2020 & ದಿ:19.05.2020 ರಾಲೆಪ 2(2) ಸಿಪ್ರನೇ 2017 ದಿನಾಂಕ:23.01.2018

*****

ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆಗೊಂಡು ಹಾಗೂ ಅನುಕಂಪದ ಆಧಾರದ ಮೇಲೆ ಲೆಕ್ಕ ಸಹಾಯಕರಾಗಿ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಗೆ ಹಂಚಿಕೆಯಾಗಿದ್ದು, ಉಲ್ಲೇಖ (2)ರ ಈ ಕಛೇರಿಯ ಅಧಿಕೃತ ಜ್ಞಾಪನಗಳನ್ವಯ ಈ ಇಲಾಖೆಯಲ್ಲಿ ನೇಮಕಗೊಂಡು ಪ್ರಧಾನ ಕಚೇರಿ, ಅಧೀನ ಕಚೇರಿಗಳಲ್ಲಿ ಹಾಗೂ ಅನ್ಯ ಸೇವಾ ಕಚೇರಿಗಳಲ್ಲಿ ನಿಯೋಜನೆ ಮೇರೆಗೆ ಕರ್ತವ್ಯಕ್ಕೆ ಹಾಜರಾಗಿರುವ ಈ ಕೆಳಕಂಡ ನೌಕರರುಗಳು ಎರಡು ವರ್ಷಗಳ ಪರೀಕ್ಷತಾ ಅವಧಿಯನ್ನು ಪೂರ್ಣಗೊಳಿಸಿರುತ್ತಾರೆ. ಸದರಿ ನೌಕರರುಗಳು ಪರೀಕ್ಷತಾ ಅವಧಿಯಲ್ಲಿ ಈ ಇಲಾಖೆಯ ಲೆಕ್ಕ ಸಹಾಯಕರ ಹುದ್ದೆಗೆ ನಿಗದಿಪಡಿಸಿರುವ ಇಲಾಖಾ ಪರೀಕ್ಷೆಗಳಾದ (1)ಅಕೌಂಟ್ಸ್ ಹೈಯರ್ (2) ಲೋಕಲ್ ಲಾಸ್ & ಕಮರ್ಷಿಯಲ್ ಬುಕ್ ಕೀಪಿಂಗ್‌ಗಳಲ್ಲಿ ತೇರ್ಗಡೆ ಹೊಂದಿರುತ್ತಾರೆ ಹಾಗೂ ಕರ್ನಾಟಕ ನಾಗರಿಕ ಸೇವಾ (ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆ) ನಿಯಮಾವಳಿಗಳು 1977ರ ನಿಯಮ 5(5)ರನ್ವಯ ಕನ್ನಡ ಭಾಷಾ ಪರೀಕ್ಷೆಯಿಂದ ವಿನಾಯಿತಿ ಪಡೆದಿರುತ್ತಾರೆ.

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು 2015 ರನ್ವಯ ಈ ಕೆಳಕಂಡ ನೌಕರರುಗಳು ಮಾಡ್ಯೂಲ್ 1, 2 ಮತ್ತು 3, ಪಂಚತಂತ್ರ, ಎಂ.ಎಸ್. ಆಫೀಸ್ ಮತ್ತು E- Gov ಫೈನಾನ್ಸಿಯಲ್ಸ್ ತರಬೇತಿಗಳನ್ನು ಪೂರೈಸಿರುತ್ತಾರೆ. ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು 2012ರನ್ವಯ ಈ ಕೆಳಕಂಡ ನೌಕರರುಗಳು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಪಾಸು ಮಾಡಿರುತ್ತಾರೆ.

ಸದರಿ ನೌಕರರುಗಳು ಪರೀಕ್ಷತಾ ಅವಧಿಯಲ್ಲಿ ಯಾವುದೇ ಅನಧಿಕೃತ ಗೈರುಹಾಜರಿ/ಅಮಾನತ್ತಿನಲ್ಲಾಗಲೀ ಇರುವುದಿಲ್ಲ. ಇವರ ವಿರುದ್ಧ ಯಾವುದೇ ಇಲಾಖಾ ವಿಚಾರಣೆಯಾಗಲೀ ಬಾಕಿ ಇರುವುದಿಲ್ಲ. ಸದರಿ ನೌಕರರುಗಳ ಸೇವಾ ದೃಢೀಕರಣ ವರದಿಗಳನ್ವಯ ಸೇವೆಯು ತೃಪ್ತಿಕರವಾಗಿರುವುದು ಕಂಡುಬರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಕ್ರ.ಸಂ(01) ರಿಂದ (06)ರಲ್ಲಿನ ನೌಕರರುಗಳ ಪರೀಕ್ಷತಾ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ (ಪರೀಕ್ಷತಾ) ನಿಯಮಗಳು 1977ರ ನಿಯಮ 5(1)(ಎ)ರನ್ವಯ ಅಂಕಣ(4)ರಲ್ಲಿ ತಿಳಿಸಿರುವ ದಿನಾಂಕದಂದು ತೃಪ್ತಿಕರವಾಗಿ ಪೂರೈಸಿದ್ದಾರೆಂದು ಘೋಷಿಸಬೇಕಾಗಿರುತ್ತದೆ

| ಕ್ರ ಸಂ | ನೌಕರರ ಹೆಸರು ಮತ್ತು ಕಾರ್ಯನಿರ್ವಹಿರುತ್ತಿರುವ ಕಛೇರಿ ವಿಳಾಸ. ಶ್ರೀ/ಶ್ರೀಮತಿ | ಕರ್ತವ್ಯಕ್ಕೆ ಹಾಜರಾದ ದಿನಾಂಕ | ಎರಡು ವರ್ಷಗಳ ಪರೀಕ್ಷತಾ ಅವಧಿ ಮುಗಿಯುವ ಮತ್ತು ಘೋಷಿಸಿದ ದಿನಾಂಕ | ಇಲಾಖಾ ಪರೀಕ್ಷಾ ಫಲಿತಾಂಶವು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕ. |
|---|---|---|---|---|
| 1 | 2 | 3 | 4 | 5 |
| 1 | ಸಂಜಯ್ ಜಾಧವ್<br>ಕಾರ್ಯದರ್ಶಿಗಳು<br>ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ,<br>ಕಲಬುರಗಿ. | ದಿ:20.01.2020 ಪೂರ್ವಾಹ್ನ | ದಿ:19.01.2022 ಅಪರಾಹ್ನ | ದಿ:28.10.2021 |
| 2 | ಮೋನಿಕಾ<br>ರಿಜಿಸ್ಟ್ರಾರ್ ಕಚೇರಿ, ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ,<br>ಕಲಬುರಗಿ ಪೀಠ,<br>ಕಲಬುರಗಿ. | ದಿ:23.10.2019 ಪೂರ್ವಾಹ್ನ | ದಿ:22.10.2021 ಅಪರಾಹ್ನ | ದಿ:19.11.2020 |
| 3 | ರಾಣಿ ಆರ್<br>ಕಾರ್ಯನಿರ್ವಾಹಕ ಅಧಿಕಾರಿಗಳ ಕಚೇರಿ,<br>ತಾಲ್ಲೂಕ್ ಪಂಚಾಯತ್,<br>ಹೆಚ್.ಡಿ ಕೋಟೆ,<br>ಮೈಸೂರು. | ದಿ:25.01.2018 ಪೂರ್ವಾಹ್ನ | ದಿ:24.01.2020 ಅಪರಾಹ್ನ | ದಿ:09.11.2018 |
| 4 | ಸಂಜಯ್<br>ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ,<br>ಜಿಲ್ಲಾ ಪಂಚಾಯತಿ,<br>ಮಡಿಕೇರಿ. | ದಿ:01.02.2020 ಪೂರ್ವಾಹ್ನ | ದಿ:31.01.2022 ಅಪರಾಹ್ನ | ದಿ:28.10.2021 |
| 5 | ಅಫ್ಸರ್ ಖಾನ್ .ಎಸ್<br>ಆಡಳಿತಾಧಿಕಾರಿಗಳು,<br>ಅಡ್ವೋಕೇಟ್ ಜನರಲ್‌ರವರ ಕಚೇರಿ,<br>ಬೆಂಗಳೂರು. | ದಿ:26.06.2020 ಪೂರ್ವಾಹ್ನ | ದಿ:25.06.2022 ಅಪರಾಹ್ನ | ದಿ:28.10.2021 |
| 6 | ಶ್ರೀನಿವಾಸ ಹೆಚ್.ಟಿ<br>ಜಂಟಿ ನಿರ್ದೇಶಕರ ಕಚೇರಿ,<br>ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ,<br>ತುಮಕೂರು. | ದಿ:12.03.2020 ಪೂರ್ವಾಹ್ನ | ದಿ:11.03.2022 ಅಪರಾಹ್ನ | ದಿ:28.10.2021 |

## <u>ಆದೇಶ</u>

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಕ್ರಸಂ (1) ರಿಂದ (06)ರಲ್ಲಿನ ನೌಕರರು ಪರೀಕ್ಷತಾವಧಿಯನ್ನು ಕ.ನಾ.ಸೇ (ಪರೀಕ್ಷತಾ) ನಿಯಮಗಳು 1977ರ ನಿಯಮ 5(1) (ಎ) ರನ್ವಯ ಅಂಕಣ (4)ರಲ್ಲಿ ತಿಳಿಸಿರುವ ದಿನಾಂಕದಂದು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಘೋಷಿಸಲಾಗಿದೆ.

ಪ್ರಧಾನ ನಿರ್ದೇಶಕರು,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ,
ಬೆಂಗಳೂರು.

ಪ್ರತಿಗಳು:

1. ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿ ಶ್ರೀ ಸಂಜಯ್ ಜಾಧವ್ ಲೆಕ್ಕ ಸಹಾಯಕರು, ಇವರ ಪರೀಕ್ಷತಾ ಅವಧಿ ಘೋಷಣೆಯ ಮಾಹಿತಿಯನ್ನು ಸೇವಾ ಪುಸ್ತಕದಲ್ಲಿ ದಾಖಲಿಸಲು ಕೋರಿದೆ. ನೌಕರರ ಸೇವಾ ಪುಸ್ತಕವನ್ನು ಲಗತ್ತಿಸಿ ಕಳುಹಿಸಿದೆ.
2 ರಿಜಿಸ್ಟ್ರಾರ್‌ರವರು, ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ, ಕಲಬುರಗಿ ಪೀಠ, ಕಲಬುರಗಿ ಶ್ರೀಮತಿ ಮೋನಿಕಾ, ಲೆಕ್ಕ ಸಹಾಯಕರು, ಇವರ ಪರೀಕ್ಷತಾ ಅವಧಿ ಘೋಷಣೆಯ ಮಾಹಿತಿಯನ್ನು ಸೇವಾ ಪುಸ್ತಕದಲ್ಲಿ ದಾಖಲಿಸಲು ಕೋರಿದೆ. ನೌಕರರ ಸೇವಾ ಪುಸ್ತಕವನ್ನು ಲಗತ್ತಿಸಿ ಕಳುಹಿಸಿದೆ.
3 ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕ್ ಪಂಚಾಯತ್, ಹೆಚ್.ಡಿ ಕೋಟೆ, ಮೈಸೂರು ಶ್ರೀಮತಿ ರಾಣಿ ಆರ್, ಲೆಕ್ಕ ಸಹಾಯಕರು, ಇವರ ಪರೀಕ್ಷತಾ ಅವಧಿ ಘೋಷಣೆಯ ಮಾಹಿತಿಯನ್ನು ಸೇವಾ ಪುಸ್ತಕದಲ್ಲಿ ದಾಖಲಿಸಲು ಕೋರಿದೆ. ನೌಕರರ ಸೇವಾ ಪುಸ್ತಕ, ಅಕೌಂಟ್ಸ್ ಹೈಯರ್ ಇಲಾಖಾ ಪರೀಕ್ಷೆಯ ಮೂಲ ಪ್ರಮಾಣ ಪತ್ರವನ್ನು ಲಗತ್ತಿಸಿ ಕಳುಹಿಸಿದೆ.
4 ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಮಡಿಕೇರಿ. ಶ್ರೀ ಸಂಜಯ್, ಲೆಕ್ಕ ಸಹಾಯಕರು, ಇವರ ಪರೀಕ್ಷತಾ ಅವಧಿ ಘೋಷಣೆಯ ಮಾಹಿತಿಯನ್ನು ಸೇವಾ ಪುಸ್ತಕದಲ್ಲಿ ದಾಖಲಿಸಲು ಕೋರಿದೆ. ನೌಕರರ ಸೇವಾ ಪುಸ್ತಕವನ್ನು ಲಗತ್ತಿಸಿ ಕಳುಹಿಸಿದೆ.
5 ಆಡಳಿತಾಧಿಕಾರಿಗಳು, ಅಡ್ವೋಕೇಟ್ ಜನರಲ್‌ರವರು, ಬೆಂಗಳೂರು ಶ್ರೀ ಅಫ್ಸರ್ ಖಾನ್ .ಎಸ್, ಲೆಕ್ಕ ಸಹಾಯಕರು, ಇವರ ಪರೀಕ್ಷತಾ ಅವಧಿ ಘೋಷಣೆಯ ಮಾಹಿತಿಯನ್ನು ಸೇವಾ ಪುಸ್ತಕದಲ್ಲಿ ದಾಖಲಿಸಲು ಕೋರಿದೆ. ನೌಕರರ ಸೇವಾ ಪುಸ್ತಕವನ್ನು ಲಗತ್ತಿಸಿ ಕಳುಹಿಸಿದೆ.
6 ಜಂಟಿ ನಿರ್ದೇಶಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ತುಮಕೂರು. ಶ್ರೀ ಶ್ರೀನಿವಾಸ ಹೆಚ್.ಟಿ, ಲೆಕ್ಕ ಸಹಾಯಕರು, ಇವರ ಪರೀಕ್ಷತಾ ಅವಧಿ ಘೋಷಣೆಯ ಮಾಹಿತಿಯನ್ನು ಸೇವಾ ಪುಸ್ತಕದಲ್ಲಿ ದಾಖಲಿಸಲು ಕೋರಿದೆ. ನೌಕರರ ಸೇವಾ ಪುಸ್ತಕವನ್ನು ಲಗತ್ತಿಸಿ ಕಳುಹಿಸಿದೆ.
7 ರಿಂದ (12) ಸಂಬಂಧಪಟ್ಟ ನೌಕರರಿಗೆ ಕಛೇರಿ ಮೂಲಕ.
13 ರಿಂದ (18) ನೌಕರರ ವೈಯಕ್ತಿಕ ಕಡತಕ್ಕೆ.
19 ಕಛೇರಿ ಆದೇಶ ಪುಸ್ತಕಕ್ಕೆ.
20 ಹೆಚ್ಚುವರಿ ಪ್ರತಿ.
21 ಕಛೇರಿ ಪ್ರತಿ.